ಮಾನ್ಯ ಅಧ್ಯಕ್ಷರೇ ಒಬ್ಬ ಹೆಣ್ಣಿನ ಪ್ರಾಣದ ಪ್ರಶ್ನೆ. ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ಸಂಬಂಧಪಟ್ಟ ಮಾನ್ಯ ಸಚಿವರು ಇಲ್ಲದಕಾರಣ ನಾಳೆ ನನಗೆ ಉತ್ತರವನ್ನು ಕೊಡಿಸಬೇಕು. ನಾನು ಇದರ ಬಗ್ಗೆ ಗಮನಸೆಳೆಯುವ ಸೂಚನೆಯನ್ನೂ ಸಹ ಕೊಟ್ಟಿರುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಗಮನಸೆಳೆಯುವ ಸೂಚನೆಗೆ ಅವಕಾಶ ಕಲ್ಪಿಸಲು ಸಂಬಂಧಪಟ್ಟ ಸಚಿವರಿಗೆ ತಿಳಿಸುತ್ತೇನೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್.—ಸನ್ಮಾನ್ಯ ಅಧ್ಯಕ್ಷರೇ ಆಫಜಲಪುರ ಕ್ಷೇತ್ರದಲ್ಲಿ ಅನೇಕ ಗ್ರಾಮಗಳಿಗೆ ನೀರುಸರಬರಾಜು ಮಾಡುತ್ತಿದ್ದು, ಅಲ್ಲಿಯ ಲಾರಿ ಮತ್ತು ಟ್ರಾಕ್ಟರ್ ಮಾಲೀಕರಿಗೆ ಸರ್ಕಾರದಿಂದ ೩,೪೦,೦೦೦ ರೂ. ಬರಬೇಕಾದ ಹಣ ಇನ್ನೂ ವರೆಗೆ ಬಂದಿಲ್ಲಾ. ಮೊದಲೇ ಬರಗಾಲದ ದವಡೆಯಲ್ಲಿ ನಮ್ಮ ಕ್ಷೇತ್ರ ಸಿಲುಕಿರುವಾಗ ತಾವು ಎರಡು ಮೂರು ತಿಂಗಳಿಂದ ನೀರು ಸರಬರಾಜು ಮಾಡಿದ ವಾಹನಗಳ ಬಾಡಿಗೆ ನೀಡದೆ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ವಾಹನ ಮಾಲೀಕರು ಮುಂದೆ ಬರಲು ಹೆದರುತ್ತಿದ್ದಾರೆ. ಆದಷ್ಟು ಬೇಗ ಜಿಲ್ಲಾ ಪರಿಷತ್ತಿಗೆ ಇದರ ಹಣ ಬಿಡುಗಡೆ ಮಾಡಿ ಅಥವಾ ಬೇಗನೆ ಕೊಡಿಸುವ ಮನಸ್ಸು ಮಾಡಬೇಕಾಗಿ ಈ ಮೂಲಕ ತಿಳಿಯಪಡಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ನನ್ನ ಗಮನಕ್ಕೆ ಈ ವಿಚಾರ ಬಂದ ಕೂಡಲೇ ಹಣವನ್ನು ಬಿಡುಗಡೆ ಮಾಡಿಸಿದ್ದೇನೆ. ಇನ್ನೊಂದುವಾರದಲ್ಲಿಯೇ ಅವರಿಗೆ ಹಣವನ್ನು ಕೊಡಿಸಲು ಪ್ರಯತ್ನ ಮಾಡುತ್ತೇನೆ.

೫. ಬಳ್ಳಾರಿ ಜಿಲ್ಲಾ ಪರಿಷತ್ ಅಧ್ಯಕ್ಷರು ಸ್ಥಳೀಯ ಶಾಸಕರನ್ನು ನಿರ್ಲಕ್ಷಿಸಿ ಕಾರ್ಯಕ್ರಮಗಳನ್ನು ನಡೆಸಂತ್ತಿರುವುದರ ಬಗ್ಗೆ

ಶ್ರೀ ಬಿ. ಹೆಚ್. ಯಲಕಾನಾಯಕ್.—ಮಾನ್ಯ ಅಧ್ಯಕ್ಷರೇ ಬಳ್ಳಾರಿ ಜಿಲ್ಲಾ ಪರಿಷತ್ ಅಧ್ಯಕ್ಷರು ನಮ್ಮ ತಾಲ್ಲೂಕಿಗೆ ಬಂದಾಗ ಆ ತಾಲೂಕಿನ ಶಾಸಕನಾದ ನನಗೆ ಯಾವ ಪ್ರವಾಸದ ಕಾರ್ಯಕ್ರಮವನ್ನು ಕಳುಹಿಸುವುದಿಲ್ಲ, ತಮ್ಮಷ್ಟಕ್ಕೆ ತಾವೇ ಕ್ಷೇತ್ರದಲ್ಲಿ ಪ್ರವಾಸ ಮಾಡುವರು ಹೀಗಾಗಿ ಜಿಲ್ಲಾ ಪರಿಷತ್ ಅಧ್ಯಕ್ಷರಿಗೂ ತಾಲೂಕಿನ ಶಾಸಕರಿಗೂ ಯಾವ ಸಂಬಂಧವೂ ಇಲ್ಲವೆ ? ನನ್ನ ತಾಲ್ಲೂಕಿನಲ್ಲಿ ಕೆಲವು ಕಾರ್ಯಕ್ರಮಗಳನ್ನು ನನ್ನನ್ನು ಬಿಟ್ಟೇ ಮಾಡಿರುತ್ತಾರೆ. ತಾ : ೨೯-೮-೧೯೮೭ ರಂದು ಕಂಚಿಕೇರಿ ಮಂಡಲ ವಡ್ಡರಹಳ್ಳಿಯಲ್ಲಿ (ಸ್ಪಿಚ್ ಆನ್ ಸೆರವಂನಿ) ಗುಂಡಿ ಒತ್ತುವ ಕಾರ್ಯಕ್ರಮ ನನಗೆ ತಿಳಿಯದೆ ನೆರವೇರಿಸಿರುತ್ತಾರೆ. ಇದು ತಪ್ಪಲ್ಲವೇ ? ಮುಂದೆ ಹೀಗಾಗದಂತೆ ಸರಕಾರದವರು ಕ್ರಮ ಕೈಕೊಂಡು ಜಿಲ್ಲಾಪರಿಷತ್ ಅಧ್ಯಕ್ಷರುಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡುವರೇ ? ಇದರ ಬಗ್ಗೆ ಸರಕಾರ ದಿಂದ ಹೇಳಿಕೆ ನೀಡಬೇಕೆಂದು ಒತ್ತಾಯಿಸುತ್ತೇನೆ.

ಇದೇ ತಾಲ್ಲೂಕಿನ ಚಿಗಟೇರಿ ಗ್ರಾಮದಲ್ಲಿ ೫-೮-೧೯೮೭ ರಂದು ಜಿಲ್ಲಾ ಕೈಗಾರಿಕಾ ಕೇಂದ್ರದವರಿಂದ ಪಸತಿ ಕಾರ್ಯಗಳ ಉದ್ಘಾಟನೆ ಮತ್ತು ಅಂದೇ ಭೂಸೇನಾ ನಿಗಮದವರಿಂದ ಗುಂಪು ಮನೆಗಳ ಉದ್ಘಾಟನೆ ಕಾರ್ಯಕ್ರಮ ನನ್ನನ್ನು ಬಿಟ್ಟೇ ಮಾಡಿರುತ್ತಾರೆ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಮುಂದೆ ಹೀಗಾಗದಂತೆ ಸರಿಪಡಿಸುವಿರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ ಶಾಸಕರಿಗೆ ಸಂಬಂಧಪಟ್ಟಂತೆ ಈಗಾಗಲೇ ಒಂದು ಸುತ್ತೋಲೆಯನ್ನು ಕಳುಹಿಸಿದ್ದೇವೆ. ಸರ್ಕಾರಿ ಕಾರ್ಯಕ್ರಮಗಳು ಯಾವುದೇ ನಡೆಯಲಿ, ಎಲ್ಲೇ ನಡೆಯಲಿ ಶಾಸಕರನ್ನು ಜಿಲ್ಲಾಪರಿಷತ್ ಅಧ್ಯಕ್ಷರು ಆಹ್ವಾನಿಸಿ ಸದಸ್ಯರು ಪಾಲುಗೊಳ್ಳುವಂತೆ ಮಾಡಬೇಕು ಎನ್ನುವ ಸಲಹೆಯನ್ನು ಕೊಟ್ಟಿದ್ದೇವೆ. ಈಗ ಮಾನ್ಯ ಸದಸ್ಯರು ನನ್ನಗಮನಕ್ಕೆ ಈ ವಿಚಾರವನ್ನು ತಂದಿದ್ದಾರೆ. ಜಿಲ್ಲಾಪರಿಷತ್ ಅಧ್ಯಕ್ಷರಿಗೆ ಸೂಕ್ತ ಸಲಹೆ ಕೊಡುತ್ತೇನೆ.

ಅಧ್ಯಕ್ಷರು.—ಕಿರಿಕಿರಲ್ಲಿ ಮತ್ತೆ ಕೇಳುವುದಕ್ಕೆ ಅವಕಾಶ ಇಲ್ಲ. ಬೆಳಗೆಲ್ಲಾ ರಾಮಾಯಣ ಕೇಳಿ ರಾವಣನಿಗೂ ಸೀತೆಗೂ ಏನಾಯಿತು ಅಂದಹಾಗೆ ಆಯಿತು. ದಯವಿಟ್ಟು ಕುಳಿತುಕೊಳ್ಳಿ.